ಒಸಾಮ ಒಂದು ಕಾಲಕ್ಕೆ ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಗಾಂಧೀಜಿ ಮಾಡಿದ ಹೋರಾಟದ ಒಂದು ಮಾದರಿಯಿಂದಲೂ ಸ್ಫೂರ್ತಿ ಪಡೆದಿದ್ದ. ಒಂದು ವೇಳೆ ಒಸಾಮ ಜಗತ್ತಿನ ಇನ್ನಿತರ ದೇಶಗಳ ದೊಡ್ಡ ನಾಯಕರಂತೆ ಗಾಂಧೀಜಿಯನ್ನು ಆಳವಾಗಿ ಗ್ರಹಿಸಿದ್ದರೆ, ಗಾಂಧೀಜಿ ಬ್ರಿಟನ್ನಿನ ವಸ್ತುಗಳನ್ನು ಬಹಿಷ್ಕರಿಸಲು ಪ್ರೇರೇಪಿಸಿದ ರೀತಿಯಿಂದಷ್ಟೇ ಅಲ್ಲದೆ, ಗಾಂಧೀಜಿಯ ಹೋರಾಟಗಳ ಹಿಂದೆ ಇದ್ದ ಗುರಿ ಮತ್ತು ದಾರಿಗಳ ನೈತಿಕ ಸ್ಪಷ್ಟತೆಯಿಂದ ಸ್ಫೂರ್ತಿ ಪಡೆದಿದ್ದರೆ ಅವನ ದಿಕ್ಕೇ ಬೇರೆಯಾಗಬಹುದಿತ್ತೇನೋ. ಆಗ ಒಸಾಮ ನಿಜಕ್ಕೂ ಅಮೆರಿಕದ ನವಸಾಮ್ರಾಜ್ಯಶಾಹಿಯ ವಿರುದ್ಧ, ಜಾಗತಿಕ  ಮಾರುಕಟ್ಟೆ ಎಲ್ಲೆಡೆ ನಡೆಸುತ್ತಿರುವ ಆಕ್ರಮಣದ ವಿರುದ್ಧ ಇಡೀ ಜಗತ್ತಿನಲ್ಲೇ ಅಹಿಂಸಾತ್ಮಕ ಹೋರಾಟವೊಂದನ್ನು ರೂಪಿಸಬಹುದಿತ್ತೇನೋ. ಆಗ ಇಸ್ಲಾಮಿನ ಹೆಸರಿನಲ್ಲಿ ನಡೆಸಲಾಗುತ್ತಿರುವ ಭಯೋತ್ಪಾದನೆ ಈ ಪ್ರಮಾಣದಲ್ಲಿ ಇರುತ್ತಿರಲಿಲ್ಲವೋ ಏನೋ!

ಅಮೆರಿಕದ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಹಾಗೂ ಬರ್ಮಾದ ಆಂಗ್ ಸಾನ್ ಸೂಕಿ ತಮ್ಮ ಜೀವನದ ಒಂದು ಘಟ್ಟದಲ್ಲಿ ಗಾಂಧೀಜಿಯ ಅಹಿಂಸಾ ಮಾರ್ಗವನ್ನು ಕಂಡುಕೊಂಡಿದ್ದರಿಂದ ಅವರ ಹೋರಾಟದ ದಿಕ್ಕೇ ಬದಲಾಯಿತು ಎಂಬುದನ್ನು ಗಮನಿಸಿ ಈ ಊಹೆ ಮಾಡುತ್ತಿರುವೆ. ಯಾಕೆಂದರೆ ಬರ್ಮಾದ ಸರ್ವಾಧಿಕಾರಿ ಸರ್ಕಾರದ ಕಣ್ಣಲ್ಲಿ ಸೂಕಿ ಹಾಗೂ ಅಮೆರಿಕದ ಬಿಳಿಯ ಸರ್ಕಾರದ ಕಣ್ಣಲ್ಲಿ ಮಾರ್ಟಿನ್ ಲೂಥರ್ ಕಿಂಗ್ ಇಬ್ಬರೂ 'ಭಯೋತ್ಪಾದಕರೇ' ಆಗಿದ್ದರು. ಒಂದು ಘಟ್ಟದಲ್ಲಿ ಗಾಂಧೀಜಿಯಿಂದ ಪ್ರಭಾವಿತರಾಗಿದ್ದ ನೆಲ್ಸನ್ ಮಂಡೇಲ ಹಾಗೂ ಅವರ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಪಕ್ಷವನ್ನು ಆಫ್ರಿಕಾದ ಬಿಳಿಯರ ಸರ್ಕಾರವಿರಲಿ, ಅಮೆರಿಕ ಕೂಡ ಇಪ್ಪತ್ತನೆಯ ಶತಮಾನದ ಕೊನೆಯವರೆಗೂ ಭಯೋತ್ಪಾದಕರ ಪಟ್ಟಿಯಲ್ಲೇ ಇಟ್ಟಿತ್ತು! ಬ್ರಿಟಿಷರ ಕಣ್ಣಲ್ಲಿ ಅಹಿಂಸಾವಾದಿ ಗಾಂಧೀಜಿ ಕೂಡ ಭಯೋತ್ಪಾದಕರೇ ಆಗಿದ್ದರು!

## 2

ಜಗತ್ತಿನ ಹಲವು ಹೋರಾಟಗಾರರಿಗೆ, ಸಮುದಾಯಗಳಿಗೆ ಹಾಗೂ ಇಂಡಿಯಾದ ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರಿಗೆ ಅಹಿಂಸಾ ಮಾರ್ಗದ ಸಂಘಟಿತ ಹೋರಾಟದ ಹಾದಿ ತೋರಿದ ಗಾಂಧೀಜಿಗೆ ತಾರುಣ್ಯದಲ್ಲಿ ಅಹಿಂಸಾ ಮಾರ್ಗದ ಬಗ್ಗೆ ಅಂಥ ಒಲವೇನೂ ಇರಲಿಲ್ಲ. 'ಇಂಗ್ಲೆಂಡಿಗೆ ಹೋಗುವ ಮೊದಲು ನಾನು ಹಿಂಸಾಮಾರ್ಗವನ್ನು ಬೆಂಬಲಿಸುತ್ತಿದ್ದೆ. 'ಟಾಲ್‌ಸ್ಟಾಯ್ ನನ್ನನ್ನು ಹಿಂಸೆಯ ಹಾದಿಗೆ ಹೋಗದಂತೆ ತಡೆದರು' ಎಂದು ಗಾಂಧೀಜಿ ಬರೆಯುತ್ತಾರೆ. ಅದರಲ್ಲೂ ಟಾಲ್‌ಸ್ಟಾಯ್ ಹೇಳಿದ 'ಆತ್ಮ ಶಕ್ತಿ' ಮತ್ತು 'ಪ್ರೀತಿ ಶಕ್ತಿ' ಪರಿಕಲ್ಪನೆಗಳು ಗಾಂಧೀಜಿಯನ್ನು ಪ್ರಭಾವಿಸಿದವು. ಆನಂತರ ಹತ್ತೊಂಬತ್ತನೇ ಶತಮಾನದ ಅಮೆರಿಕದ ಚಿಂತಕ ಹೆನ್ರಿ ಡೇವಿಡ್ ಥೋರೋ ಅಮೆರಿಕನ್ ಸರ್ಕಾರದ ವಿರುದ್ಧ ಮಾಡಿದ ಏಕಾಂಗಿ ಪ್ರತಿಭಟನೆ ಕುರಿತು ಓದುತ್ತಾ ಗಾಂಧೀಜಿಗೆ ಬ್ರಿಟಿಷರ ಪ್ರಬಲ ಸರ್ಕಾರವನ್ನು ಎದುರಿಸುವ ಮಾರ್ಗವೊಂದು ಹೊಳೆಯತೊಡಗುತ್ತದೆ.

ಅಮೆರಿಕ ಹಾಗೂ ಮೆಕ್ಸಿಕೋಗಳ ನಡುವಣ ಯುದ್ಧವನ್ನೂ ಅಮೆರಿಕದಲ್ಲಿ ಕರಿಯರ ಗುಲಾಮಗಿರಿಯನ್ನೂ ಥೋರೋ ವಿರೋಧಿಸಿದ. ನ್ಯಾಯಹೀನ ಅಮೆರಿಕಾ ಸರ್ಕಾರಕ್ಕೆ ತೆರಿಗೆ ಕೊಡಲು ನಿರಾಕರಿಸಿದ. ಬಂಧನಕ್ಕೊಳಗಾದ. 'ಸಿವಿಲ್ ಡಿಸೊಬಿಡಿಯೆನ್ಸ್' (ನಾಗರಿಕ ಅವಿಧೇಯತೆ) ಎಂಬ ಮಹತ್ವದ ಪ್ರಬಂಧ ಬರೆದ ಥೋರೋ ನಾಡಿನಿಂದ ದೂರವಾಗಿ